ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಬೋಧಕೇತರ ವೃಂದಕ್ಕೆ ಮುಂಬಡ್ತಿ.

391 – ಶ್ರೀ ಕುಂಬ್ಳೆ ಸುಂದರರಾಮ್ (ಸೂರತ್ಕಲ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರಕಾರಿ ಸೇವೆಯಲ್ಲಿ ಬಡ್ತಿಯನ್ನು ನೀಡುವಾಗ ಬಡ್ತಿ ಪಡೆಯುವಂಥ ನೌಕರರು ಬಡ್ತಿ ಪಡೆಯುವ ವೃಂದದ ಮೂಲ ವೇತನ ದಾಟಿದಲ್ಲಿ ಅಂಥವರಿಗೆ ಮುಂಬಡ್ತಿ ನೀಡಿದಾಗ ಒಂದು ವೇತನದಲ್ಲಿ ಇನಕ್ರೀಮೆಂಟ್‌ನ್ನು ನೀಡುವುದು ನಿಜವಲ್ಲವೆ?*

ಆ) *ಶಿಕ್ಷಣ ಇಲಾಖೆಯ ಮೈಸೂರು ವಿಭಾಗದ ಸಹನಿರ್ದೇಶಕರು ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಬೋಧಕ ವೃಂದದ ಉಪನ್ಯಾಸಕರು ಪ್ರಾಂಶುಪಾಲರಾಗಿ ಬಡ್ತಿ ಪಡೆದಲ್ಲಿ ಅವರಿಗೆ ಮೇಲಿನ ಸೌಲಭ್ಯ ನೀಡುತ್ತಿರುವುದು ನಿಜವಲ್ಲವೆ?*

ಇ) *ಶಿಕ್ಷಣ ಇಲಾಖೆಯ ಮೈಸೂರು ವಿಭಾಗದ ಸಹನಿರ್ದೇಶಕರು ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜಿನ ಬೋದಕೇತರ ಲಿಪಿಕ ವೃಂದದ ಎರಡನೇ ದರ್ಜೆ ಸಹಾಯಕರು, ಪ್ರಥಮ ದರ್ಜೆ ಸಹಾಯಕರು, ಪ್ರಥಮ ದರ್ಜೆ ಸಹಾಯಕರಾಗಿ ಬಡ್ತಿ ಪಡೆದಾಗ ಸದರಿ ಸೌಲಭ್ಯಗಳನ್ನು ನಿರಾಕರಿಸುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ ಬೋಧಕೇತರ ವೃಂದದವರಿಗೂ ಬಡ್ತಿ ಸಂಬಂಧದ ಮೇಲಿನ ನ್ಯಾಯಬದ್ಧ ಸೌಲಭ್ಯವನ್ನು ನೀಡುವಲ್ಲಿ ಸರಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಹೌದು.

ಇ) ಬಂದಿದೆ.

ಈ) ಪರಿಶೀಲಿಸಲಾಗುವುದು.

ಅನುದಾನಿತ ಆಯುರ್ವೇದ ಕಾಲೇಜುಗಳು.

392 - ಶ್ರೀ ಕುಂಬ್ಳೆ ಸುಂದರರಾಮ್ (ಸುರತ್ಕಲ್) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವೆರೆ?

ಅ) *ರಾಜ್ಯದಲ್ಲಿರುವ ಒಟ್ಟು ಆಯುರ್ವೇದ ಕಾಲೇಜುಗಳ ಸಂಖ್ಯೆ ಎಷ್ಟು? ಅವುಗಳಲ್ಲಿ ಅನುದಾನಿತ ಕಾಲೇಜುಗಳೆಷ್ಟು?*

ಆ) *ರಾಜ್ಯದಲ್ಲಿ ಭಾಷಾ ಅಲ್ಪಸಂಖ್ಯಾತರು ನಡೆಸುತ್ತಿರುವ ಆಯುರ್ವೇದ ಕಾಲೇಜುಗಳು ಎಷ್ಟು? ಅವುಗಳಲ್ಲಿ ಅನುದಾನಿತ ಕಾಲೇಜುಗಳು ಎಷ್ಟು?*

ಇ) ಭಾಷಾ ಅಲ್ಪಸಂಖ್ಯಾತರು ನಡೆಸುತ್ತಿರುವ ಅನುದಾನಿತ ಆಯುರ್ವೇದ ಕಾಲೇಜುಗಳಲ್ಲಿನ ನೇಮಕಾತಿ ಪ್ರಕ್ರಿಯೆಗಳು ಸರ್ಕಾರದ ಆದೇಶಾನುಸಾರ ನಡೆಯುತ್ತಿವೆಯೇ? ನಡೆಯುತ್ತಿದ್ದಲ್ಲಿ ಭಾಷಾ ಅಲ್ಪಸಂಖ್ಯಾತ ಸಂಸ್ಥೆಗಳಿಗೆ ಅವುಗಳ ಸ್ವಾತಂತ್ರವನ್ನು ಮೊಟಕು ಗೊಳಿಸಿದಂತಾಗುವುದಿಲ್ಲವೇ?

ಈ) ಭಾಷಾ ಅಲ್ಪಸಂಖ್ಯಾತ ಸಂಸ್ಥೆಗಳು ನಡೆಸುತ್ತಿರುವ ಇತರೆ ಶಾಖಾ ಕಾಲೇಜುಗಳಿಗೆ ಈ ವಿಚಾರದಲ್ಲಿ ಸರ್ಕಾರದವರು ಉದಾರ ನೀತಿಯನ್ನು ಅನುಸರಿಸಿ ಆಯುರ್ವೇದ ಕಾಲೇಜುಗಳನ್ನು ನಡೆಸುತ್ತಿರುವ ಭಾಷಾ ಅಲ್ಪಸಂಖ್ಯಾತ ಸಂಸ್ಥೆಗಳಿಗೆ ಮಾತ್ರ ಕಟ್ಟುನಿಟ್ಟಾದ ಧೋರಣೆಯನ್ನು ಅನುಸರಿಸುತ್ತಿರುವುದು ನಿಜವಲ್ಲವೇ?

ಉ) ಭಾಷಾ ಅಲ್ಪಸಂಖ್ಯಾತ ಸಂಸ್ಥೆಗಳು ನೆಡಸುತ್ತಿರುವ ಆಯುರ್ವೇದ ಕಾಲೇಜುಗಳ ಸಿಬ್ಬಂದಿಗಳ ನೇಮಕಾತಿಯ ವಿಚಾರದಲ್ಲಿ ಸರ್ಕಾರದ ಸ್ಪಷ್ಟಧೋರಣೆ ಏನು?

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಒಟ್ಟು 22 ಅನುದಾನಿತ ಕಾಲೇಜು - 5

ಆ) ಭಾಷಾ ಅಲ್ಪ ಸಂಖ್ಯಾತರ ಆಯುರ್ವೇದ ಕಾಲೇಜು - 2,
ಅನುದಾನಿತ-1

ಇ) ಈ ವಿಷಯವು ಈಗಾಗಲೇ ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಈ) ಹಾಲಿಯಿರುವ ನಿಯಮಗಳ ಪ್ರಕಾರ ಅನುದಾನಿತ ಕಾಲೇಜುಗಳು ಮೀಸಲಾತಿ ನಿಯಮಗಳಿಗೆ ಒಳಪಟ್ಟಿರುತ್ತವೆ. ಕೆಲವು ಅಲ್ಪ ಸಂಖ್ಯಾತ ಸಂಸ್ಥೆಗಳು ಮೀಸಲಾತಿ ನಿಯಮಗಳಿಂದ ವಿನಾಯಿತಿ ಕೊಡಬೇಕೆಂದು ಕೊಡಬೇಕೆಂದು ಕೇಳುತ್ತಿವೆ. ಈ ಬಗ್ಗೆ ಪರಿಶೀಲನೆ ಮಾಡಿ, ತೀರ್ಮಾನ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿ ಖಾಲಿ ಇರುವ ಶಿಕ್ಷಕರು ಉಪನ್ಯಾಸಕರ ಹುದ್ದೆಗಳ ಭರ್ತಿ.

393 - ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತಕ್ಕೆ ಅನುಗುಣವಾಗಿ ಪದವಿಪೂರ್ವ ಕಾಲೇಜುಗಳನ್ನು ನಡೆಸಲಾಗುತ್ತಿದೆಯೇ?

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು?

ಇ) ರಾಜ್ಯದಾದ್ಯಂತ ಖಾಲಿ ಇರುವ ಶಿಕ್ಷಕರ ಮತ್ತು ಉಪನ್ಯಾಸಕರನ್ನು ಭರ್ತಿ ಮಾಡಲು ಸರ್ಕಾರ (ಪದವಿ ಪೂರ್ವ ಕಾಲೇಜು ಮತ್ತು ಶಾಲಾವಾರು ಖಾಲಿ ಹುದ್ದೆಗಳ ವಿವರಗಳನ್ನು ನೀಡುವುದು)

ಈ) ಎಷ್ಟು ಸಮಯದೊಳಗಾಗಿ ಈ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು?